ನಾನು ಅನೇಕ ಹಿರಿಯ ಸಾಹಿತಿಗಳ ಆತ್ಮೀಯ ಒಡನಾಟದಲ್ಲಿ ಲೇಖಕನಾಗಿ ಬೆಳೆದವನು. ಅ.ನ.ಕೃ., ತ.ರಾ.ಸು., ಬೀಚಿ, ಕೃಷ್ಣಮೂರ್ತಿ ಪುರಾಣಿಕ, ನಾಡಿಗೇರ ಕೃಷ್ಣರಾಯ ಮೊದಲಾದವರ ಆತ್ಮೀಯ ಬಳಗದಲ್ಲಿದ್ದು ಅವರ ಸಾಹಿತ್ಯ, ಅವರ ಕಾರ್ಯಸಾಧನೆಗಳನ್ನು ಮೆಚ್ಚಿ ಅವರ ಗೌರವಾರ್ಥವಾಗಿ ಅವರ ಸಮಗ್ರ ಸಾಹಿತ್ಯ ಸಂಪಾದನೆ, ಗೌರವ ಗ್ರಂಥ ಸಂಪಾದನೆ, ಸಂಸ್ಮರಣ ಗ್ರಂಥ ಸಂಪಾದನೆಯ ಕಾರ್ಯಗಳನ್ನು ನಿಷ್ಠೆಯಿಂದ ಹಾಗೂ ಪ್ರೀತಿಯಿಂದ ನಡೆಸಿಕೊಟ್ಟಿದ್ದೇನೆ. ಈ ಕಾರ್ಯದಲ್ಲಿ ನನಗೆ ಕನ್ನಡ ಸಾಹಿತ್ಯ ವಲಯದ ಅನೇಕ ದಿಗ್ಗಜರನ್ನು ಭೇಟಿಯಾಗುವ, ಪರಿಚಯಿಸಿಕೊಳ್ಳುವ ಅವಕಾಶಗಳು ದೊರೆತಿವೆ. ನನ್ನ ವೈಯಕ್ತಿಕ ಬರವಣಿಗೆಗೂ ಸ್ಫೂರ್ತಿ, ಪ್ರೇರಣೆಗಳು ಲಭಿಸಿವೆ. ಸಾಹಿತ್ಯ ಪರಿಚಾರಕತೆ (ಪರಿಚಾರಕ ಕಾರ್ಯ) ಎನ್ನುವುದು ಕಡಿಮೆ ದರ್ಜೆಯ ಕಾರ್ಯನಿರ್ವಹಣೆಯಂತೂ ಖಂಡಿತಾ ಅಲ್ಲ.

◆ **ಪ್ರಮುಖ ಲೇಖಕರು ಇದ್ದಾಗ ಸಾಂಸ್ಕೃತಿಕ ರಾಜಕೀಯ ವಾಗ್ವಾದಗಳು ಇರುತ್ತಿದ್ದವು. ಈಗೀಗ ಅಂತಹ ಚರ್ಚೆಗಳೇ ಕಾಣುತ್ತಿಲ್ಲ. ಭಾಷೆ ಮತ್ತು ಸಾಹಿತ್ಯದ ಕುರಿತಂತೆ ವಾಗ್ವಾದ, ಚರ್ಚೆಗಳು ಇಲ್ಲದಿರುವುದು ಅಪಾಯಕಾರಿ ಲಕ್ಷಣವಲ್ಲವೇ? ಇದು ಏನನ್ನು ಸೂಚಿಸುತ್ತದೆ?**

ಹಿಂದೆ ಸಾಹಿತಿಗಳ ಮನೆಯಲ್ಲಿ ನಡೆಯುತ್ತಿದ್ದ ಗೋಷ್ಠಿಗಳಲ್ಲಿ ಆ ಕಾಲದ ಪ್ರಮುಖ ಲೇಖಕರು ಭಾಗವಹಿಸುತ್ತಿದ್ದರು. ಅ.ನ.ಕೃ. ಅವರ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ, ನಾನು ಕಂಡ ಹಾಗೆ ಅವರ ಮನೆಯಲ್ಲಿ ಅನೇಕ ಲೇಖಕರು ಒಟ್ಟು ಸೇರಿ ನಾಡು, ನುಡಿ, ಸಾಹಿತ್ಯದ ಕುರಿತು ಚರ್ಚೆಯನ್ನು ನಡೆಸುತ್ತಿದ್ದರು. ಅಲ್ಲಿ ಸಮಕಾಲೀನ ರಾಜಕೀಯ ವಿದ್ಯಮಾನಗಳು ಚರ್ಚೆಗೆ ಬರುತ್ತಿದ್ದವು. ಯಾವುದೇ ವಾಗ್ವಾದಗಳು ನಡೆದರೂ ವೈಯಕ್ತಿಕ ಟೀಕೆಗಳಿಗೆ ಅಲ್ಲಿ ಅವಕಾಶವಿರುತ್ತಿರಲಿಲ್ಲ. ಈ ಗೋಷ್ಠಿ, ಚರ್ಚೆಗಳು ಸಾಹಿತಿಯಲ್ಲಿ ಇರಬೇಕಾದ ಸಾಮಾಜಿಕ ಹಾಗೂ ರಾಜಕೀಯ ಪ್ರಜ್ಞೆಯನ್ನು ಎತ್ತಿ ತೋರಿಸುವ ರೀತಿಯದ್ದಾಗಿ ಇರುತ್ತಿದ್ದವು. ಇತ್ತೀಚಿಗಿನ ದಿನಗಳಲ್ಲಿ ಅಂತಹ ವಾತಾವರಣ ಎಲ್ಲಿಯೂ ಗೋಚರಿಸುತ್ತಿಲ್ಲ. ಸಾಹಿತಿಗಳು ಪರಸ್ಪರ ಅಂತರವನ್ನು ಸೃಷ್ಟಿಸಿಕೊಂಡು ದ್ವೀಪಗಳಾಗುತ್ತಿದ್ದಾರೆ. ಇದು ಉತ್ತಮ ಬೆಳವಣಿಗೆಯಂತೂ ಖಂಡಿತಾ ಅಲ್ಲ.

◆ **ಬರವಣಿಗೆಗೆ ಸಂಬಂಧಿಸಿದಂತೆ ನಿಮ್ಮ ಮುಂದಿನ ಯೋಜನೆಗಳೇನು?**

ಸದ್ಯ ಕೊಂಕಣಿಯಿಂದ ಚಂದ್ರಕಾಂತ ಕೇಣಿ ಮತ್ತು ಮಹಾಬಳೇಶ್ವರ ಸೈಲ್ ಅವರ ಕಥಾಸಾಹಿತ್ಯವನ್ನು ಹಾಗೂ ಮರಾಠಿಯಿಂದ ನಾಟಕವನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಹಾಕಿಕೊಂಡಿದ್ದೇನೆ. ಇದರ ನಂತರ ಅನುವಾದ ಕಾರ್ಯಕ್ಕೆ ತಡೆ ಹಾಕಬೇಕೆಂದಿದ್ದೇನೆ. ಯಾಕೆಂದರೆ ಸೃಜನಶೀಲ ಬರವಣಿಗೆಗಿಂತ ಅನುವಾದ ಬಹಳ ಕಷ್ಟದ ಕೆಲಸ. ಹೆಚ್ಚು ಶ್ರಮ, ದುಪ್ಪಟ್ಟು ಸಮಯ ಬೇಡುವಂತಹದು.

◆ **ನಿಮ್ಮ ಕೃತಿಗಳಿಗೆ ದೊರೆತಿರುವ ಮನ್ನಣೆ, ಗೌರವ ಮತ್ತು ವಿಮರ್ಶೆಗಳು ನಿಮಗೆ ತೃಪ್ತಿ ತಂದಿವೆಯೇ?**

ಪ್ರಶಸ್ತಿಗಳಿಗಿಂತ ಓದುಗರ ಮನ್ನಣೆ ನನಗೆ ಹೆಚ್ಚಿನದು. ಇಂದಿನ ದಿನಗಳಲ್ಲಿ ವಸ್ತುನಿಷ್ಠ ವಿಮರ್ಶೆ ಎನ್ನುವುದು ಕಾಣದಿರುವುದರಿಂದ ಅದರ ಕುರಿತು ಮಾತನಾಡದೇ ಇರುವುದೇ ವಾಸಿ. ಅದರಲ್ಲಿಯೂ ಅನುವಾದಕರನ್ನು ಮುಖ್ಯವಾಹಿನಿಯಲ್ಲಿ ಗುರುತಿಸುವುದು ಬಹಳ ಕಡಿಮೆ. ನನ್ನ ಬರವಣಿಗೆ, ನನ್ನ ಸಾಹಿತ್ಯಕ ಕಾರ್ಯಗಳು ನನಗೆ ತೃಪ್ತಿಯನ್ನು ನೀಡಿವೆ.